ಮುತ್ತುಚಾಂಡಿಯ ಮನೆಯ ಬಾಗಿಲುಗಳು ಮುಚ್ಚಿಕೊಂಡಿದ್ದವು. ಇನ್ನೂ ಬೆಳಕಾಗಿಲ್ಲ ಆಸಾಮಿಗೆ ಅಂದುಕೊಂಡು ಬಾಗಿಲು ಬಡಿದ ಅವಸರದಲ್ಲಿ. ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಇರಲಿಲ್ಲ ಬಾಗಿಲಿನ ಬಡಿತಕ್ಕೆ. ಪಕ್ಕದ ಕೋಣೆಗಳತ್ತ ನೋಡಿದ. ಎಲ್ಲಾ ಬಾಗಿಲುಗಳು ಮುಚ್ಚಿತ್ತು. ಕೊನೆಗೆ ಹೆಸರು ಹಿಡಿದು ಕರೆದ.

'ಮುತ್ತುಚಾಂಡಿ, ಪಾಂಬು ಬಂದಿದ್ದೇನೆ. ಬಾಗಿಲು ತೆಗಿ'

'ನಿನ್ನ ಆತುರ ನೋಡಿದ್ರೆ ಅಡಕತ್ತರಿಯಲ್ಲಿ ಸಿಕ್ಕಿ ಹಾಕಿಕೊಂಡ ಹಾಗಿದೆ. ಅದಕ್ಕೆ ತಾಳ್ಮೆಯಿಲ್ಲದಂತೆ ಬಾಗಿಲ ಮೇಲೆ ಬಡಿಯುತ್ತಿರುವೆ'

ಪಾಂಬುವಿನ ಹಿಂದಿನಿಂದ ಕೇಳಿಸಿದ ಮಾತುಗಳಿಗೆ ಕತ್ತು ತಿರುಗಿಸಿ ನೋಡಿದ. ಮುತ್ತುಚಾಂಡಿ ಮೀನಿನ ಗುಚ್ಛೆಯನ್ನು ಹಿಡಿದುಕೊಂಡು ಬರುತ್ತಿರುವುದು ಕಂಡಿತು. ಇಷ್ಟು ಬೆಳಗ್ಗೆ ಮೀನು ತಂದಿರುವುದು ಎಲ್ಲಿಂದ? ಅನ್ನುವ ಪ್ರಶ್ನೆ ಪಾಂಬುವಿಗೆ.

'ಏನು, ಆತುರದಲ್ಲಿರುವ ಹಾಗಿದೆ? ಮತ್ತೆ ಏನಾದರೂ ಅನಾಹುತ ಮಾಡಿಕೊಂಡಿರುವೆಯಾ?'

ಬಾಗಿಲಿನ ಬೀಗ ತೆರೆದು ಒಳಗಡಿಯಿಟ್ಟ ಮುತ್ತುಚಾಂಡಿ. ಪಾಂಬು ಕೂಡ ಅವನ ಹಿಂದೆಯೇ ಒಳಗೆ ನುಗ್ಗಿದ.

'ಅನಾಹುತದ ಪ್ರಶ್ನೆಯಲ್ಲ. ನಿನ್ನ ಸಹಾಯ ಯಾಚಿಸಿ ಬಂದಿದ್ದೇನೆ'

'ನೀನು ಹೇಳುವ ವಿಷಯಕ್ಕಾದರೆ ನನ್ನ ಸಹಾಯ ಇಲ್ಲ. ಅದನ್ನು ನಿನಗೆ ಈಗಾಗಲೇ ತಿಳಿಸಿದ್ದೇನೆ. ಅದರಿಂದ ತೊಂದರೆ ತಪ್ಪಿದ್ದಲ್ಲ. ಆ ವಿಷಯವಾದರೆ ಬಂದ ದಾರಿಯಲ್ಲೇ ಹಿಂತಿರುಗು' ಎಚ್ಚರಿಕೆಯ ಪದಗಳನ್ನು ಉಪಯೋಗಿಸಿದ ಮುತ್ತುಚಾಂಡಿಯ ಮಾತುಗಳು ದರ್ಪದಿಂದ ಕೂಡಿದ್ದವು.

ಪಾಂಬು ಭೂಮಿಯವರೆಗೂ ಬಾಗಿದಂತೆ ನಿಂತ.

'ಬೆಳ್ಳಂಬೆಳಗೆ ಇಷ್ಟೊಂದು ಮೀನು ಎಲ್ಲಿಂದ? ಯಾರಿಗಾಗಿ ಮುತ್ತುಚಾಂಡಿ?' ನಯವಾದ ಮಾತುಗಳಿಂದ ಅವನನ್ನು ಪಾಲೀಷು ಮಾಡಲು ಯತ್ನಿಸಿದ. ಮುತ್ತುಚಾಂಡಿ ಪಾಂಬುವಿನತ್ತ ಚೂಪು ನೋಟ ಬೀರಿದ. ಪಾಂಬು ಆ ನೋಟವನ್ನು ಎದುರಿಸದಾದ.

'ವಿಚಿತ್ರ ಪ್ರಶ್ನೆ ನಿನ್ನದು ಪಾಂಬು. ಈ ಮೀನುಗಳು ನನ್ನ ದಾಬಾಕ್ಕೆ. ನೀನು ಅದನ್ನು ಮರೆತು ಬಿಟ್ಟೆ. ಬೆಳ್ಳಂಬೆಳಗ್ಗೆ ಮೀನು ಎಲ್ಲಿಂದ ಅನ್ನೋದು ಕ್ಷುಲ್ಲಕ ಪ್ರಶ್ನೆ. ನಮಗೆ ಮೀನುಗಾರಿಕೆಯ ದೋಣಿಯಿರೋದು ಗೊತ್ತಲ್ಲ?'

ಪಾಂಬುವಿಗೆ ಆಶ್ಚರ್ಯವಾಯಿತು. ದೋಣಿ ಸಮುದ್ರಕ್ಕೆ ಇಳಿಯದೆ ಬಹಳ ಸಮಯವಾಗಿತ್ತು. ಕೆಲಸಗಾರರು ಹಠ ಹಿಡಿದು ಮೀನಿಗಾಗಿ ತೆರಳುವುದಿಲ್ಲವೆಂದು ಜಗಳ ಮಾಡಿರುವುದು ಗೊತ್ತು. ಜೊತೆಗೆ ಮುತ್ತುಚಾಂಡಿಗೆ ಹೊಡೆತ ಬಿದ್ದಿರುವುದು ತಿಳಿಯದ್ದಲ್ಲ. ಒಂದು ದೋಣಿ ಹಾಳಾಗಿ ಮೂಲೆ ಸೇರಿದರೆ ಇನ್ನೊಂದು ದೋಣಿ ಕೆಲಸಗಾರರಿಲ್ಲದೆ ಹಾಗೆಯೇ ದಂಡೆಯ ಮೇಲೆ ಲಂಗರು ಹಾಕಿ ನಿಂತಿದೆ. ಈಗ ಮತ್ತೆ ದೋಣಿ ಮೀನುಗಾರಿಕೆಗೆ ತೆರಳಿದೆ. ಮುತ್ತುಚಾಂಡಿಯ ಮಾತು ಅಚ್ಚರಿ ಹುಟ್ಟಿಸಿತು ಪಾಂಬುವಿಗೆ.

'ದೋಣಿ ಸಮುದ್ರಕ್ಕೆ ತೆರಳೋದಿಲ್ಲಂತ ನೀನೇ ಹೇಳಿದ್ದೆಯಲ್ಲವೆ ಮುತ್ತುಚಾಂಡಿ'

'ಯಾಕೆ ಹೇಳಿದ್ದೆ? ಆ ಕಾರಣ ನಿನಗೂ ತಿಳಿಯದ್ದಲ್ಲ'

'ಕೆಲಸಗಾರರು ನಮ್ಮ ದೋಣಿಯನ್ನು ನೀರಿಗೆ ಇಳಿಸುವುದಕ್ಕೆ ತಯಾರಿಲ್ಲ ಅಂದಿದ್ದೆ. ಅವರು ನನ್ನ ಬಳಿ ಕೂಡ ಹೇಳಿದ್ದಾರಲ್ಲವೆ?'

'ಹೌದು, ಅದು ಸರಿಯಾದ ಕಾರಣ ಅಲ್ಲ. ನಮ್ಮ ದೋಣಿಯನ್ನು ಅವರು ಸಮುದ್ರಕ್ಕೆ ಇಳಿಸದಿರುವುದಕ್ಕೆ ಮತ್ತೊಂದು ಕಾರಣವೂ ಇದೆ. ಅದು ನಿನಗೆ ಗೊತ್ತಲ್ಲವೆ?'

ಪಾಂಬುವಿನ ಮುಖ ಕಂತಿತು. ಮತ್ತೊಂದು ಪ್ರಬಲವಾದ ಕಾರಣವೂ ಇಲ್ಲದ್ದಲ್ಲ. ಅದಕ್ಕಾಗಿಯೇ ಕೆಲಸಗಾರರು ಮತ್ತೆ ಅವನ ನಡುವೆ ಮಾತುಕತೆಯಾಗಿತ್ತು. ಆದರೆ ಅದನ್ನು ನಿಭಾಯಿಸಲು ಮುತ್ತುಚಾಂಡಿಯನ್ನು ಮುಂದು ಮಾಡಿ ನುಣುಚಿಕೊಂಡಿದ್ದ. ಇದೇ ಕಾರಣಕ್ಕೆ ಮುತ್ತುಚಾಂಡಿ ಪಾಂಬುವಿಗೆ ಸಹಾಯ ಹಸ್ತ ನೀಡುತ್ತಿಲ್ಲವೆನ್ನುವುದು ಪಾಂಬುವಿಗೆ ಗೊತ್ತು.

'ಗೊತ್ತು'

'ಏನು ಗೊತ್ತಿರೋದು? ನೀನು ದೋಣಿಯನ್ನು ಬೇರೆ ಯಾವುದೋ ಉದ್ದೇಶಕ್ಕೆ ಬಳಸಿಕೊಂಡಿದ್ದೆ. ಅದಕ್ಕೆ ಅವರು ನಿನ್ನ ಜೊತೆಗೆ ಜಗಳ ಕಾದಿದ್ದು. ನೀನು ಸಂಬಾಳಿಸುವುದಕ್ಕೆ ನನ್ನನ್ನು ಕಳುಹಿಸಿದೆ. ಅವರ ಜೊತೆ ನಾನು ದರ್ಪದಿಂದ ವರ್ತಿಸಿದೆ. ಅದಕ್ಕೆ ಅವರು ನನ್ನ ಮೇಲೆ ಕೈ ಮಾಡಿರೋದು. ಪಾಂಬು, ಇನ್ನು ಮುಂದೆ ಆ ದೋಣಿಯ ಸಂಪೂರ್ಣ ಜವಾಬ್ದಾರಿ ನನ್ನದು. ನಿನ್ನ ಪಾಲುದಾರಿಕೆಯ ಹಣ ನಾನು ವಾಪಸ್ ಮಾಡ್ತೀನಿ'

'ನೀನು ಮತ್ತೆ ಅವರನ್ನು ಕೆಲಸಕ್ಕೆ ಕರೆಸಿಕೊಂಡಿರುವುದರಿಂದ ಅಪಾಯ ತಪ್ಪಿದ್ದಲ್ಲ'

'ಅಪಾಯ ನನಗೇನು ಇಲ್ಲ. ನಾನು ಆ ಕೆಲಸಗಾರರನ್ನೇನೂ ನೇಮಿಸಿ ಕೊಂಡಿಲ್ಲ. ಬೇರೆ ಜನರನ್ನು ನೇಮಿಸಿಕೊಂಡಿದ್ದೇನೆ. ನೀನು ಅಪಾಯದಲ್ಲಿದ್ದೀಯಾಂತ ನೆನಪಿಟ್ಕೋ' ಮುತ್ತುಚಾಂಡಿಯ ಮಾತುಗಳಿಗೆ ಪಾಂಬು ಮೆಲ್ಲನೆ ಮೈ ಅದುರಿಸಿದ.

'ಹೌದು ಮುತ್ತುಚಾಂಡಿ, ಅದನ್ನು ನಿನಗೆ ಹೇಳೋಕೇಂತ್ಲೆ ಬಂದೆ ನಾನು'

'ಮೊದಲು ನೀನು ಆ ಹಿತೇಶನನ್ನು ಪೊಲೀಸರಿಗೆ ಒಪ್ಪಿಸಿ ಬಿಡು. ಆಗ ನಿರಾಳನಾಗ್ತೀಯಾ' ಮುತ್ತುಚಾಂಡಿಯ ಮಾತಿಗೆ ಅಡ್ಡಡ್ಡಲಾಗಿ ತಲೆಯಲುಗಿಸಿದ ಪಾಂಬು. ಮುತ್ತುಚಾಂಡಿಗೆ ಪಾಂಬುವಿನ ಮೊಂಡುತನಕ್ಕೆ ಬೇಸರವಾಯಿತು. ಜೊತೆಗೆ ಸಿಟ್ಟೂ ಮೂಡಿತು.

'ನೀನು ಅದನ್ನು ನಿರಾಕರಿಸೋದ್ರಿಂದ ಇನ್ನಷ್ಟು ಕಗ್ಗಂಟಿಗೆ ಸಿಕ್ಕಾಕೊಳ್ತೀಯಾ ಪಾಂಬು. ಮರ್ಯಾದೆಯಿಂದ ಅವನನ್ನು ಒಪ್ಪಿಸಿ ಬಿಡು. ಇಲ್ಲಾಂದ್ರೆ...'

'ಇಲ್ಲಾಂದ್ರೆ, ಏನು ಮಾಡೋಕೆ ಸಾಧ್ಯ ಮುತ್ತುಚಾಂಡಿ?'

'ಇಲ್ಲಾಂದ್ರೆ ನಾನೇ ಪೊಲೀಸರಿಗೆ ಒಪ್ಪಿಸಿ ಬಿಡ್ತೀನಿ. ಈ ವಿಷಯದಲ್ಲಿ ನಿನ್ನ ಜೊತೆಗೆ ಆ ಕಾಕುಟ್ಟನೂ ಸೇರಿದ್ದಾನೇಂತ ತಿಳಿಸ್ತೀನಿ'

ಪಾಂಬು ನಿರುತ್ತರನಾದ. ಮುತ್ತುಚಾಂಡಿಗೆ ಅವನ ವಿಷಯ ತಿಳಿಯದ್ದಲ್ಲ. ಪಕ್ಕನೆ ಒಪ್ಪಿಕೊಳ್ಳುವ ಜಾಯಮಾನ ಕೂಡ ಪಾಂಬುವಿನದ್ದಲ್ಲ. ದೀರ್ಘ ಮೌನದ ಬಳಿಕ ಮುತ್ತುಚಾಂಡಿಯೇ ಮತ್ತೆ ಪ್ರಶ್ನೆ ಹಾಕಿದ.

'ಅಂತು ನೀನು ಅವನನ್ನು ಪೊಲೀಸರಿಗೆ ಒಪ್ಪಿಸೋದಿಲ್ಲ?'

'ಇಲ್ಲದ್ದನ್ನು ಎಲ್ಲಿಂದ ಸೃಷ್ಟಿಸಲಿ?'

ಮುತ್ತುಚಾಂಡಿಗೆ ಅವನ ಪ್ರಶ್ನೆ ಅರ್ಥವಾಗಲಿಲ್ಲ. ಇಲ್ಲದನ್ನು ಸೃಷ್ಟಿಸುವ ಪ್ರಶ್ನೆ ಎಲ್ಲಿದೆ. ಹಿತೇಶನನ್ನು ಪೊಲೀಸರ ವಶಕ್ಕೆ ಬಿಟ್ಟು ಬಿಡುವಂತೆ ಹೇಳಿದರೆ ಅದನ್ನು ಒಪ್ಪಿಕೊಳ್ಳದ ಪಾಂಬುವಿಗೆ ಸರಿಯಾದ ಶಾಸ್ತಿ ಮಾಡಬೇಕಾದವರು ಪೊಲೀಸರೆ. ಇನ್ಸ್‌ಪೆಕ್ಟರ್ ರಾಜಧಾನಿಗೆ ವಿಷಯವನ್ನು ತಿಳಿಸಿ ಪಾಂಬುವಿನ ಬಾಯಿ ಬಿಡಿಸಿದರೆ ಎಲ್ಲವೂ ನಿರಾಳ. ತಾನೆ ಆ ಕೆಲಸವನ್ನು ಮಾಡಿ ಮುಗಿಸಿದರೆ ಹೇಗೆ? ಪಾಂಬುವಿನ ಜೀವಕ್ಕಾದರೂ ಅಪಾಯವಿರದು.

'ನೀನು ಮೊಂಡುತನ ಮಾಡ್ಬೇಡ. ಇದರಿಂದ ನಿನಗೆ ಅಪಾಯ ತಪ್ಪಿದ್ದಲ್ಲ. ನಿನ್ನ ಪ್ರಾಣಕ್ಕೂ ಸಂಚಕಾರ. ನನ್ನ ಮಾತು ನೀನು ನಂಬೋದಿಲ್ಲ'

'ಮುತ್ತುಚಾಂಡಿ, ನಿನಗೆ ವಿಷಯ ಗೊತ್ತಿದೆ ಅಂದ್ಕೊಂಡಿದ್ದೆ. ಹಿತೇಶ ನಾಲ್ಕು ದಿವಸದಿಂದ ಕಾಣಿಸ್ತಾ ಇಲ್ಲ. ಅವನನ್ನು ಹುಡುಕೋ ಪ್ರಯತ್ನ ಮಾಡ್ತಾ ಇದ್ದೀನಿ. ಈ ವಿಷಯವನ್ನು ಪೊಲೀಸರಿಗೂ ತಿಳಿಸಿದ್ದೀನಿ. ಅವರಿಗೆ ನನ್ನ ಮೇಲೆ ಅನುಮಾನ. ನಾನು ಹಿತೇಶನನ್ನು ಮುಚ್ಚಿಟ್ಟಿದ್ದೀನೀಂತ. ಅದಕ್ಕೆ ನಿನ್ನ ಸಹಾಯ ಕೇಳ್ಕೊಂಡು ಬಂದೆ. ನೀನು ನನಗೆ ಸಹಾಯ ಮಾಡದಿದ್ದರೆ ನನ್ನ ಪ್ರಾಣ ಖಂಡಿತ ಹೋಗುತ್ತೆ' ಭಯವಿತ್ತು ಪಾಂಬುವಿನ ಮಾತಿನಲ್ಲಿ.

ಮುತ್ತುಚಾಂಡಿ ಆಲೋಚನೆಗೊಳಗಾದ. ಪಾಂಬು ಈ ವಿಷಯವನ್ನು ಇಲ್ಲಿಯವರೆಗೆ ತನ್ನ ಬಳಿ ಗೌಪ್ಯವಾಗಿಟ್ಟದ್ದೇಕೆ? ಅವನು ಹಿತೇಶ ಲಹರಿಯನ್ನು ಪ್ರೀತಿಸುತ್ತಿದ್ದ ಮತ್ತು ಮರಳು ದಿಣ್ಣೆಯಲ್ಲಿ ಅಲೆದಾಡುತ್ತಿದ್ದ ವಿಷಯವನ್ನು ಕಾಕುಟ್ಟನಿಗೆ ಹೇಳಿದ್ದಾನೆ. ಕಾಕುಟ್ಟನೇ ಹಿತೇಶನಿಗೆ ಅಪಾಯ ತಂದೊಡ್ಡಿದ್ದಾನೆ!

ಮುತ್ತುಚಾಂಡಿ ಅಸಹಾಯಕನಂತೆ ಕುಳಿತ.

* * *

ಅಧಃಪತನಕ್ಕೆ ಇಳಿದಿದ್ದ ಪಾಂಬು ಕೆನ್ನೆಗೆ ಕೈ ಹಚ್ಚಿ ಕುಳಿತು ಎದುರಿಗೆ ಮೀನಿನ ಗುಚ್ಛೆಯನ್ನು ಪಾಲಿಥಿನ್ ಬ್ಯಾಗ್‌ಗೆ ಸೇರಿಸುತ್ತಿದ್ದ ಮುತ್ತುಚಾಂಡಿಯನ್ನು ನೋಡಿದ. ಮುತ್ತುಚಾಂಡಿಯ ಮುಖದಲ್ಲಿಯೂ ಮುಂದೇನು ಅನ್ನುವ ವಿಪ್ಲವ ನಡೆಯುತ್ತಿತ್ತು.

ಮುತ್ತುಚಾಂಡಿ ಕೈಗಡಿಯಾರ ನೋಡಿಕೊಂಡ. ಸಮಯ ಆಗಲೇ ಮೀರುತ್ತಿರುವುದು ಗಮನಕ್ಕೆ ಬಂತು. ಢಾಬಾಕ್ಕೆ ಮೀನನ್ನು ಸರಿಯಾದ